GC 2131/12-13
21/12/2012

ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

ವಾ.ತೆ.ಜಂ.ಆ.(ಮ)-1,ಬೆಂ
ಸಿಆರ್.01.ಪೀಠೋ/2012-13

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರವರ ಕಚೇರಿ,
(ಮನವಿಗಳು)-1, 2ನೇ ಮಹಡಿ, ಬಿಎಂಟಿಸಿ,
ಟಿಟಿಎಂಸಿ, 'ಬಿ' ಬ್ಲಾಕ್, ಶಾಂತಿನಗರ,
ದಿನಾಂಕ:-21-12-2012.

## "ಬಹಿರಂಗ ಹರಾಜು ಸೂಚನೆ"

ಈ ವಿಭಾಗದಿಂದ ಸಂಗ್ರಹಿತವಾಗಿರುವ ಮುರಿದು ಹಾಳಾಗಿರುವ ಹಳೆಯ ದುಸ್ತಿತಿಯಲ್ಲಿರುವ ಹಾಗೂ ನಿರುಪಯುಕ್ತ ಪೀಠೋಪಕರಣಗಳು ದಿನಾಂಕ: 29/12/2012 ರಂದು ಬೆಳಿಗ್ಗೆ 11.00 ಗಂಟೆಗೆ ಅಭಯ ಕಾಂಪ್ಲೆಕ್ಸ್, ರಿಸಾಲ್‌ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20 ಇಲ್ಲಿ ಹರಾಜು ಮೂಲಕ ವಿಲೇವಾರಿ ಮಾಡಲು ಉದ್ದೇಶಿಸಲಾಗಿದೆ ಮತ್ತು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ 8277027203, 9845028264

ಹರಾಜಿಗೆ ಇಟ್ಟಿರುವ ಹಳೆಯ ನಿರುಪಯುಕ್ತ ಮುರಿದು ಹಾಳಾಗಿರುವ ಪೀಠೋಪಕರಣಗಳ ವಿವರ ಅಡಕ ಪತ್ರದಲ್ಲಿ ವಿಸ್ತೃತವಾಗಿ ಸೂಚಿಸಲಾಗಿದೆ.

### ಹರಾಜಿನ ಷರತ್ತುಗಳು ಮತ್ತು ನಿಬಂಧನೆಗಳು

1) ಮೇಲೆ ಸೂಚಿಸಿರುವ ಹರಾಜಿಗೆ ಇಟ್ಟಿರುವ ಸಾಮಗ್ರಿಗಳನ್ನು ಹರಾಜು ದಿನಾಂಕದಂದು ಬೆಳಿಗ್ಗೆ 9.30 ಗಂಟೆಗೆ ಯಿಂದ 11.00 ಗಂಟೆ ಸಮಯದಲ್ಲಿ ದಿನಾಂಕ:29/12/2012 ರಂದು ಆಸಕ್ತ ಬಿಡ್ಡುದಾರರು ಪರಿಶೀಲಿಸಬಹುದಾಗಿದೆ.

2) ಆಸಕ್ತ ಬಿಡ್ಡುದಾರರು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಮುನ್ನ ರೂ. 2,000/- ಭದ್ರತಾ ಠೇವಣಿ ನೀಡಿ ತಮ್ಮ ಹೆಸರು / ಸಂಸ್ಥೆಯ ಹೆಸರನ್ನು ನೋಂದಾಯಿಸಿಕೊಂಡು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು, ಹರಾಜು ಪ್ರಕ್ರಿಯೆಗೆ ನಿಯೋಜಿಸುವ ಅಧಿಕಾರಿಗಳು / ಸಿಬ್ಬಂದಿಯವರಿಂದ ಟೋಕನ್ ಪಡೆಯತಕ್ಕದ್ದು.

3) ಆಸಕ್ತ ನೋಂದಾಯಿತ ಬಿಡ್ಡುದಾರರ ನೋಂದಣಿ ಪ್ರಕ್ರಿಯೆ ಬೆಳಿಗ್ಗೆ 11.00 ಗಂಟೆಯಿಂದ 11.30 ಗಂಟೆಗೆ ಮುಕ್ತಾಯವಾಗುತ್ತದೆ.

4) ಹರಾಜು ಪ್ರಕ್ರಿಯೆಯನ್ನು 12.00 ಗಂಟೆ ಸಮಯದಲ್ಲಿ ಪ್ರಾರಂಭಿಸಲಾಗುವುದು ಕೇವಲ ಭದ್ರತಾ ಠೇವಣಿ ಪಡೆದು ಟೋಕನ್‌ನ್ನು ಪಡೆದ ಆಸಕ್ತ ಬಿಡ್ಡುದಾರರು ಮಾತ್ರ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ.

5) ಹರಾಜಿನಲ್ಲಿ ಯಶಸ್ವಿಯಾದ ಬಿಡ್ಡದಾರರು ಹರಾಜು ಪ್ರಕ್ರಿಯೆ ಮುಗಿದ ಒಂದು ಗಂಟೆಯ ಅವಧಿ ಯೊಳಗೆ ಬಿಡ್ಡಿನ ಪೂರ್ತಿ ಮೊತ್ತವನ್ನು ನಗದು ಮುಖಾಂತರ ಪಾವತಿ ಮಾಡಿ ಯಶಸ್ವಿ ಬಿಡ್ಡುದಾರರು ಬಿಡ್ಡು ಪ್ರಕ್ರಿಯೆ ಮುಗಿದ ಒಂದು ಗಂಟೆಯೊಳಗೆ ಸದರಿ ಸಾಮಗ್ರಿಗಳನ್ನು ಸ್ಥಳದಿಂದ ಸ್ವಾಧೀನ ಪಡೆದುಕೊಂಡು ಹೋಗಬೇಕಾಗಿದೆ.

6) ಮೇಲಿನ ಸಾಮಗ್ರಿಗಳನ್ನು "ಎಲ್ಲಿ ಹೇಗಿವೆಯೋ ಆಗಿನ ಸ್ಥಿತಿಯಲ್ಲಿ" ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡಲಾಗುವುದು.

7) ಮೇಲಿನ ಹರಾಜು ಪ್ರಕ್ರಿಯೆಯನ್ನು ಯಾವುದೇ ಸೂಚನೆ ನೀಡದೇ ರದ್ದು ಪಡಿಸಲು/ಮುಂದೂಡಲು ಅಧಿಕಾರವನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಹೊಂದಿರುತ್ತಾರೆ.

8) ಅತೀ ಹೆಚ್ಚಿನ ಮೊತ್ತಕ್ಕೆ ಬಿಡ್ ಮಾಡುವ ವ್ಯಕ್ತಿಗಳ/ಸಂಸ್ಥೆಗಳ ಬಿಡ್ಡುಗಳನ್ನು ಅಂಗೀಕರಿಸುವ ಹಾಗೂ ಅಧಿಕಾರವನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಹೊಂದಿರುತ್ತಾರೆ.

(ಬಿ.ಟಿ. ಗೋವಿಂದರಾಜ್)
ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು,
(ಮನವಿಗಳು)-1, ಬೆಂಗಳೂರು.

Joint Commr. of Comml. Taxes
(Appeals)-1, Bangalore.